5. ವಿಷಯ:–ಭಾರತ ದೇಶದ 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜಮಖಂಡಿಯಲ್ಲಿ ನೇಣು ಶಿಕ್ಷೆಗೆ ಒಳಗಾದ ಹುತಾತ್ಮ ಫಟುಸಿಂಗ್‌ರ ಸ್ವಾರಕದ ಬಗ್ಗೆ ಭೂಮಾಪನಾ ದಾಖಲೆಯಿದ್ದು, 1973 ರಲ್ಲಿ ವಕ್ಫ್ ಬೋರ್ಡ್ ಈ ಸ್ವಾರಕವನ್ನು ' ಫಟುಸಿಂಗ್ ಕಮಲಸಾಬ ದರ್ಗಾ ' ಎಂದು ಕಾನೂನುಬಾಹಿರ ಆಜ್ಞೆ ಮಾಡಿರುವುದನ್ನು ರದ್ದು ಮಾಡುವ ಬಗ್ಗೆ.

ಶ್ರೀ ಕುಲಕರ್ಣಿ ಶ್ರೀಕಾಂತ್: ಮಾನ್ಯ ಅಧ್ಯಕ್ಷರೆ, ಭಾರತ ದೇಶದ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜಮಖಂಡಿಯಲ್ಲಿ ನೇಣು ಶಿಕ್ಷೆಗೆ ಒಳಗಾದ ಹುತಾತ್ಮ ಫಟುಸಿಂಗ್‌ರ ಸ್ವಾರಕದ ಬಗ್ಗೆ ಭೂಮಾಪನಾ ದಾಖಲೆಯಿದ್ದು, 1973 ರಲ್ಲಿ ವಕ್ಫ್ ಬೋರ್ಡ್ ಈ ಸ್ವಾರಕವನ್ನು ಫಟುಸಿಂಗ್ ಕಮಲಸಾಬ ದರ್ಗಾ' ಎಂದು ಕಾನೂನುಬಾಹಿರ ಆಜ್ಞೆ ಮಾಡಿರುವುದನ್ನು ರದ್ದು ಮಾಡುವ ಬಗ್ಗೆ ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಪ್ರೊ. ಡಾ: ಮುಮ್ತಾಜ್ ಅಲಿಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ): ಮಾನ್ಯ ಅಧ್ಯಕ್ಷರೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 8 ಸಿಡ್ಲ್ಯೂಎಫ್ 61, ದಿನಾಂಕ 14–2–1962ರಲ್ಲಿ ವಕ್ಫ್ ಕಾಯ್ದೆ 1954ರ ಕಲಂ 4(1)ರಲ್ಲಿ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರ ಕೇಂದ್ರೀಯ ಸಹಾಯಕ ಇವರನ್ನು ಬೆಂಗಳೂರು, ಬಳ್ಳಾರಿ, ಚಿತ್ರದುರ್ಗ, ಕೋಲಾರ, ತುಮಕೂರು, ಬೀದರ್, ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ, ಹಾಗೂ ಸಹಾಯಕ ಆಯುಕ್ತರು ಹಿಂದು ಧರ್ಮ ಮತ್ತು ದತ್ತಿ ಇಲಾಖೆಯ ಮಂಗಳೂರು ಇವರನ್ನು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮಂಡ್ಯ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಹೆಚ್ಚುವರಿ ವಕ್ಫ್ ಆಯುಕ್ತರಾಗಿ ರಾಜ್ಯದಲ್ಲಿ ಮೊದಲನೇ ಸರ್ವೆ ಕಾರ್ಯಕೈಗೊಳ್ಳಲು ನೇಮಿಸಲಾಗಿತ್ತು. ಈ ಆದೇಶದ ಪ್ರಯುಕ್ತ ಸಹಾಯಕ ಆಯುಕ್ತರು, ಬಿಜಾಪುರ ಇವರು ಬಿಜಾಪುರ ಜಿಲ್ಲೆಯ ಸಹಾಯಕ ವಕ್ಫ್ ಆಯುಕ್ತರಾಗಿ ನೇಮಕಗೊಂಡಿದ್ದು ಜಮಖಂಡಿಯಲ್ಲಿನ ಗಟ್ಟುಸಿಂಗ್ ಮಹರಾಜ್ ಉರುಫ್ ಕಮಾಲ್ ಸಾಹೇಬ್ ದರ್ಗಾ ಎಂಬ ಸಂಸ್ಥೆಯ ಆಸ್ತಿಯನ್ನು ಸರ್ವೇ ಮಾಡಿ ಸದರಿ ವಕ್ಫ್ ಸಂಸ್ಥೆಯಲ್ಲಿ ವಾರ್ಷಿಕ ಉರುಸ್ ಕಾರ್ಯಕ್ರಮ ನಡೆಯುತ್ತಿದ್ದು ಈ ಸಂಸ್ಥೆಯನ್ನು

ವಕ್ಫ್ ಎಂದು ಪರಿಗಣಿಸಿ ದೃಢೀಕೃತವಾಗಿದೆ. ಸರ್ವೇ ವರದಿಯ ಪ್ರಕಾರ ವಕ್ಫ್ ಸಂಸ್ಥೆಯ ಮುತವಲ್ಲಿಯವರಿಗೆ ದಿನಾಂಕ 25–3–1967ರಂದು ನೋಟೀಸು ಜಾರಿ ಮಾಡಲಾಗಿದೆ. ಸರ್ವೆ ವರದಿಯ ಪ್ರಕಾರ ಗಟ್ಟುಸಿಂಗ್ ಮಹಾರಾಜ್ ಉರುಫ್ ಕಮಾಲ್ ಸಾಹೇಬ್ ದರ್ಗಾ 1857ರಿಂದ ವಕ್ಫ್ ಎಂದು ನಿರ್ವಹಿಸಲಾಗುತ್ತಿದೆ. ಪ್ರಸ್ತುತ ಜಾಗದಲ್ಲಿ ಸರ್ಕಾರ ಒಂದು ಸ್ಮಾರಕವನ್ನು 1957ರಲ್ಲಿ ನಿರ್ಮಿಸಲಾಗಿದೆ ಎಂದು ಸರ್ವೇ ವರದಿಯಲ್ಲಿ ವರದಿಸಲಾಗಿದೆ.

ಗಟ್ಟು ಸಿಂಗ್ ಮಹರಾಜ್ ಉರುಫ್ ಕಮಾಲ್ ಸಾಹೇಬ್ ದರ್ಗಾ ಸಂಸ್ಥೆಯನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ವತಿಯಿಂದ ವಕ್ಫ್ ಎಂದು ಪರಿಗಣಿಸಿ ಆದೇಶ ಹೊರಡಿಸಿರುವುದಿಲ್ಲ ಆದರೆ ಸದರಿ ಸಂಸ್ಥೆ ಸಹಾಯಕ ವಕ್ಫ್ ಆಯುಕ್ತರು, ಬಿಜಾಪುರ ಜಿಲ್ಲೆ ಇವರ ಸರ್ವೇ ವರದಿಯನ್ವಯ ವಕ್ಫ್ ಎಂದು ಪರಿಗಣಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಸಹಾಯಕ ಆಯುಕ್ತರು ಸರ್ವೆ ವರದಿಯನ್ನು ದೃಢೀಕರಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಒಂದು ವರ್ಷದೊಳಗೆ ಯಾವುದೇ ತಕರಾರು ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ಇಂತಹ ತಕರಾರು ಅರ್ಜಿ ಇಲ್ಲದಿದ್ದಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಆದೇಶ ಅಂತಿಮವಾಗಿರುತ್ತದೆ. ಇಂತಹ ಆದೇಶವನ್ನು ರದ್ದು ಮಾಡಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಗಟ್ಟು ಸಿಂಗ್ ಮಹರಾಜ್ ಉರುಫ್ ಕಮಾಲ್ ಸಾಹೇಬ್ ದರ್ಗಾ ಸಂಸ್ಥೆಯ ನೋಂದಣಿಯನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಥವಾ ಸರ್ಕಾರದಿಂದ ರದ್ದು ಮಾಡಲು ಅವಕಾಶವಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 17 ಡಬ್ಲ್ಯೂಜಿಎ 2009, ದಿನಾಂಕ 3–8–2009ರಲ್ಲಿ ಹಜರರ್ ಕಮಾಲ್ ಸಾಹೇಬ ದರ್ಗಾ, ಜಮಖಂಡಿ, ಈ ಸಂಸ್ಥೆಗೆ ರೂ. 50,000/– ಅನುದಾನ ಮಂಜೂರು ಮಾಡಿದ್ದು, ಸದರಿ ಹಣವನ್ನು ವಕ್ಫ್ ಸಂಸ್ಥೆ, ಮಂಡಳಿಯಿಂದ ಪಡೆದಿರುವುದಿಲ್ಲ.

ಶ್ರೀ ಕುಲಕರ್ಣಿ ಶ್ರೀಕಾಂತ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಉತ್ತರ ಬಹಳ ಸತ್ಯಕ್ಕೆ ದೂರವಾಗಿದೆ. ಇವತ್ತು ಕೂಡ ನಗರ ಭೂಮಾಪನಾ ಕಛೇರಿ, ಜಮಖಂಡಿಯಲ್ಲಿ ಸಿಟಿ ಸರ್ವೆ ನಂಬರ್4138 ನಂಬರ್ ರೆಕಾರ್ಡ್ ಇದ್ದು 958.19 Sq.Metre ಸ್ಥಳವಿದೆ. ಇದು 1857 ರಲ್ಲಿ ಜಮಖಂಡಿ ಸಂಸ್ಥಾನದಲ್ಲಿ ಕಮಾಂಡರ್ ಆಗಿ ಕೆಲಸ

ಮಾಡತಕ್ಕಂಥ ಈ ಘಟುಸಿಂಗ್, ಇವರು ಘಟುಸಿಂಗ್ ಅಲ್ಲ, ಚಟ್ಟುಸಿಂಹ. ಇವರು ಈಸ್ಟ್ ಇಂಡಿಯಾ ಕಂಪನಿ ವಿರುದ್ಧ ಹೋರಾಟ ಮಾಡಿದಾಗ ಜಮಖಂಡಿ ಮಹಾರಾಜರ ವಯಸ್ಸು 13 ಆಗಿತ್ತು. ಜಮಖಂಡಿ ಮಹಾರಾಜರು ಮತ್ತು ಚಟ್ಟುಸಿಂಹರವರನ್ನು ಅರೆಸ್ಟ್ ಮಾಡಿ ಬ್ರಿಟಿಷರು ಬೆಳಗಾಂ ಹಿಂಡಲಗಾ ಜೈಲಿನಲ್ಲಿ ಇಡುತ್ತಾರೆ. ಆ ಸಂದರ್ಭದಲ್ಲಿ 13 ವಯಸ್ಸಿನ ಮಹಾರಾಜರ ತಪ್ಪು ಏನಿಲ್ಲವೆಂದು ಸ್ವತ: ಆ ತಪ್ಪನ್ನು ಚಟ್ಟುಸಿಂಹ ತನ್ನ ಮೇಲೆ ಹಾಕಿಕೊಂಡು ಅವನಿಗೆ ಜಮಖಂಡಿಗೆ ಬಂದು ಅವತ್ತು ಮರಕ್ಕೆ ಅವನಿಗೆ ನೇಣಿಗೆ ಹಾಕುತ್ತಾರೆ. ಅದರ ಪರಿಣಾಮ ಮೂರು ದಿವಸ ಶವ ಜೋತಾಡುತ್ತಿರುತ್ತದೆ. ಯಾರೂ ಕೂಡ ಆ ಶವದ ಅಂತ್ಯಸಂಸ್ಕಾರಕ್ಕೆ ಮುಂದೆ ಬರುವುದಿಲ್ಲ. ಆ ಸಂದರ್ಭದಲ್ಲಿ ಅವರಿಗೆ ಆತ್ಮೀಯರಾಗಿದ್ದಂಥ ಜಮಾದಾರ್ ಎಂಬಂಥ ಒಬ್ಬ ಅಲ್ಪಸಂಖ್ಯಾತ ಸ್ನೇಹಿತ ಆ ಶವವನ್ನು ಕೆಳಗಿಳಿಸಿ ಅಂತ್ಯ ಸಂಸ್ಕಾರ. . .

ಅಧ್ಯಕ್ಷರು: ನೀವು ಕ್ಲಾರಿಫಿಕೇಶನ್ ಮಾತ್ರ ಕೇಳಿ.

ಶ್ರೀ ಕುಲಕರ್ಣಿ ಶ್ರೀಕಾಂತ್: ನಾನು ಇದನ್ನೆಲ್ಲ ಹೇಳಬೇಕಲ್ಲ. ಏಕೆಂದರೆ ಇದು ಬಹಳ ಮಹತ್ವವಾದ ವಿಷಯ. ಅದಕ್ಕಾಗಿ ವಕ್ಫ್ ಬೋರ್ಡ್‌ನವರಿಗೆ ಯಾರಿಗೂ ಗೊತ್ತಿಲ್ಲದೆ ಮತ್ತು ಸಾರ್ವಜನಿಕರ ಗಮನಕ್ಕೂ ತರದೇ ಯಾರದೋ ತಕರಾರು ಅರ್ಜಿಯನ್ನು ಸ್ವೀಕಾರ ಮಾಡುವುದು ಮತ್ತು ಇದು ಘಟುಸಿಂಗ್ ಕಮಲಸಾಬ ದರ್ಗಾ ಎಂದು 2007 ರಲ್ಲಿ ಕಾನೂನುಬಾಹಿರವಾಗಿ ಆಜ್ಞೆ ಮಾಡಿದ್ದಾರೆ. ಅದಕ್ಕೆ ಬೇಕಾದಂಥ ಎಲ್ಲಾ ರೆಕಾರ್ಡ್ಸ್‌ಗಳು ನನ್ನ ಹತ್ತಿರ ಇದೆ. ನಾವು ಪ್ರತಿ ವರ್ಷ ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಎಲ್ಲಾ ಅಧಿಕಾರಿಗಳು ಅಲ್ಲಿ ಗೌರವಾರ್ಪಣೆ ಮಾಡಿ ಬರುತ್ತೇವೆ. ಅಂಥದ್ದು ಯಾವುದೋ ಒಂದು ಕೋಮಿಗೆ ಇದನ್ನು ಬಳಸಬಾರದು. ಅದು ರಾಷ್ಟ್ರೀಯ ಸ್ವಾರಕವಾಗಬೇಕು. ಈಗ ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ ಅದು ಸತ್ಯಕ್ಕೆ ದೂರವಾಗಿದೆ. ಆದುದರಿಂದ ಮಾನ್ಯ ಸಚಿವರು ರೆಕಾರ್ಡ್ಸ್‌ಗಳನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಅನಂತರ ವರದಿಯನ್ನು ಕೊಡಬೇಕು.

ಪ್ರೊ:ಡಾ: ಮುಮ್ತಾಜ್ ಅಲಿ ಖಾನ್: ಮಾನ್ಯ ಅಧ್ಯಕ್ಷರೆ, ನನ್ನ ಗಮನಕ್ಕೆ ವಿಷಯವನ್ನು ಸೂಚಿಸಿದ್ದಾರೆ. ಆದರೆ ನನ್ನ ಉತ್ತರವನ್ನು ಅವರ ಗಮನಕ್ಕೆ ನಾನು ತರುತ್ತಿದ್ದೇನೆ.

ಅಧ್ಯಕ್ಷರು: ನೀವಿಬ್ಬರು ಕುಳಿತುಕೊಂಡು ಚರ್ಚೆ ಮಾಡಿ ಇತ್ಯರ್ಥ ಮಾಡಿ. ಇದು ಸೂಕ್ಷ್ಮ ವಿಚಾರವಾಗಿದೆ. ನೀವೂ ಗಮನ ಸೆಳೆಯುವುದು ಬೇಡ. ಅವರೂ ನಿಮ್ಮ ಗಮನ ಸೆಳೆಯುವುದು ಬೇಡ.

ಪ್ರೊ: ಡಾ:ಮುಮ್ತಾಜ್ ಅಲಿ ಖಾನ್: ಮಾನ್ಯ ಅಧ್ಯಕ್ಷರೆ, ಇಲ್ಲಿ ವಾದ ವಿವಾದಕ್ಕೆ ಆಸ್ಪದವಿಲ್ಲ. ಏಕೆಂದರೆ ನಮ್ಮ ಹತ್ತಿರ ಇರುವ ದಾಖಲೆಯನ್ನು ನಾವು ತಂದಿದ್ದೇವೆ. ನಿಮ್ಮ ಹತ್ತಿರ ಇರುವ ದಾಖಲೆಯನ್ನು ನೀವು ತಂದಿದ್ದೀರಿ. ನಿಮ್ಮ ದಾಖಲೆ ನಮ್ಮ ದಾಖಲೆಗೆ ಹೊಂದಾಣಿಕೆ ಸ್ವಲ್ಪ ಕಡಿಮೆ ಇದೆ. ಆದುದರಿಂದ ಯಾರಿಗೂ ಧಾರ್ಮಿಕ ನಂಬಿಕೆಗೆ ಧಕ್ಕೆ ಆಗದೇ ಇರಬೇಕಾದರೆ ಒಂದು ಸಮಿತಿಯನ್ನು ಮಾಡಿ ಜಿಲ್ಲಾಧಿಕಾರಿಗಳು, ಮುಜರಾಯಿ ಇಲಾಖೆಯವರು ಮತ್ತು ನಮ್ಮ ಇಲಾಖೆಯವರು, ಹೀಗೆ ಮೂರು ಜನರು ಸೇರಿಕೊಂಡು ಅವರು ವರದಿಯನ್ನು ಕೊಡಲಿ. ಇದನ್ನು ಮುಂದುವರೆಸುವುದು ಬೇಡ, ಜನರಲ್ಲಿ ಆತಂಕ ಮೂಡಿಸುವುದೂ ಬೇಡ. ಸಮಾಧಾನದಿಂದ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬಹುದು. ಸದ್ಯಕ್ಕೆ ಅಲ್ಲಿಗೆ ನಿಲ್ಲಿಸೋಣವೆಂದು ನಾನು ನಿಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಕುಲಕರ್ಣಿ ಶ್ರೀಕಾಂತ್: ಮಾನ್ಯ ಅಧ್ಯಕ್ಷರೆ,. . .

ಅಧ್ಯಕ್ಷರು: ಈಗ ಸಾಕು. ಮಾನ್ಯ ಮಂತ್ರಿಗಳು ಒಂದು ಸಮಿತಿಯನ್ನು ಮಾಡಿ ನಿಮ್ಮ ಹತ್ತಿರ ಮಾತನಾಡುತ್ತಾರಂತೆ.

6) **ವಿಷಯ:–ಲೋಕೋಪಯೋಗಿ, ನೀರಾವರಿ, ವಸತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಇತರೆ ಕಾಮಗಾರಿಗಳ ಗುತ್ತಿಗೆದಾರರಿಗೆ ಹಣ ನೀಡದಿರುವ ಬಗ್ಗೆ.**

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ, ನೀರಾವರಿ, ವಸತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ